

# ರೆಸಿನ್ ಜ್ಯುವೆಲ್ಲರಿ

**ಕಿವಿಯೋಲೆ, ಪೆಂಡೆಂಟ್ ಮುಂತಾದ ಒಡವೆಗಳಲ್ಲಿ ಹೂವು, ಎಲೆ ಬಳ್ಳಿಗಳ ಪ್ರತಿಕೃತಿಗಳನ್ನು ಅಳವಡಿಸಿ ಮಾಡಿದ ಗ್ಲಾಸ್ ಒಡವೆಗಳು ಫ್ಯಾಷನ್ ಟ್ರೆಂಡ್ ಎನಿಸಿಕೊಂಡಿವೆ.**

**■ ಸಾವಿತ್ರಿ ಪಡಸಾಲಿ**



ಸಾಮಾನ್ಯವಾಗಿ ಮೊದಲೆಲ್ಲ ಪ್ರೀತಿಪಾತ್ರರು ನೀಡಿದ ಚಾಕೊಲೇಟ್, ಹೂವು, ಎಲೆಯಂತಹ ಉಡುಗೊರೆಗಳನ್ನು ಪುಸ್ತಕಗಳ ಮಧ್ಯೆ, ಡಬ್ಬಿಯಲ್ಲಿ ಇಟ್ಟು ಜೋಪಾನ ಮಾಡಿಕೊಳ್ಳುತ್ತಿದ್ದರು. ಈಗ ಹೂವು, ಎಲೆ, ಬಳ್ಳಿಯಾಕಾರದ ಪ್ರತಿಕೃತಿಯನ್ನು ಪೆಂಡೆಂಟ್, ಓಲೆಗಳಲ್ಲಿ ಅಳವಡಿಸಿಕೊಂಡು ಕತ್ತಲ್ಲಿ, ಕೈಯಲ್ಲಿ, ಬೆರಳಲ್ಲಿ ಧರಿಸಿ ಅವರ ನೆನಪುಗಳನ್ನು ಸದಾ ಹಸಿಯಾಗಿಡಬಹುದು. ನಿಮಗೆ ನಿಸರ್ಗದ ಮೇಲೆ ಒಲವಿದ್ದರೆ ನಿಸರ್ಗದ ಗುರುತನ್ನು ಪೆಂಡೆಂಟ್ ರೂಪದಲ್ಲಿ ಧರಿಸಿ ಆನಂದಿಸಬಹುದು.

ಹೌದು. ಎಲ್ಲರನ್ನೂ ತನ್ನತ್ತ ಸೆಳೆಯುತ್ತಿರುವ ರಾಳದ ಆಭರಣಗಳು (ರೆಸಿನ್ ಜ್ಯುವೆಲ್ಲರಿ) ಫ್ಯಾಷನ್ ಟ್ರೆಂಡ್ ಎನಿಸಿಕೊಂಡಿದ್ದು, ಈ ಜಗತ್ತಿನಲ್ಲಿ ಹೊಸದೊಂದು ಆಯಾಮ ಸೃಷ್ಟಿಸಿವೆ. ರಾಳವನ್ನು ನಾವೆಲ್ಲರೂ ನೋಡಿರುತ್ತೇವೆ. ಮರದ ಪೊಟರೆಯಲ್ಲಿ ಕಾಣಸಿಗುವ ಇದಕ್ಕೆ ಆಡುಭಾಷೆಯಲ್ಲಿ ಅಂಟು ಎಂದು ಕರೆಯುತ್ತಾರೆ.

### ಏನಿದು ರೆಸಿನ್?

ಆಂಗ್ಲ ಭಾಷೆಯಲ್ಲಿ ರೆಸಿನ್ ಎಂದು ಕರೆಯುವ ದ್ರವ ರೂಪದ ವಸ್ತುವಿಗೆ ಕನ್ನಡದಲ್ಲಿ ರಾಳ ಎನ್ನುತ್ತೇವೆ. ಗಾಳಿ, ಬೆಂಕಿ, ಮಿಂಚು ಅಥವಾ ಇತರ ಕಾರಣಗಳಿಂದ ತೊಗಟೆಗೆ ಗಾಯವಾದರೆ ರಾಳ ಹುಟ್ಟುತ್ತದೆ. ಪ್ರಾಚೀನ ಕಾಲದಲ್ಲಿ ಚೀನಾ, ಜಪಾನ್, ಈಜಿಪ್ಟ್‌ನವರು ವಾರ್ನಿಷ್‌ನಂತಹ ವಸ್ತುಗಳನ್ನು ತಯಾರಿಸಲು ರಾಳ ಬಳಸುತ್ತಿದ್ದರು. ಸದ್ಯ ಇದು ಎಲ್ಲ ವೈವಿಧ್ಯದ ಆಭರಣಗಳ ತಯಾರಿಕೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಚಿನ್ನದ ಒಡವೆ ತಯಾರಿಸುವಾಗಲೂ ರಾಳವನ್ನು ಹೆಚ್ಚಾಗಿ ಬಳಸಲಾಗುತ್ತದೆ.

ರೆಸಿನ್ ಆಭರಣ ಈಗೀಗ ಜನಪ್ರಿಯತೆಯ ಹಾದಿ ಹಿಡಿದಿದೆ. ಈ ರೀತಿಯ ಓಲೆ, ಪೆಂಡೆಂಟ್ ಇಷ್ಟೊಂದು ಖ್ಯಾತಿ ಗಳಿಸಲು ಕಾರಣ ಇವುಗಳ ದೀರ್ಘ ಬಾಳಿಕೆಯ ಗುಣ. ನೀರು ತಾಗಿದರೆ ಹಾಳಾಗದೇ ಇರುವುದು, ಬಣ್ಣ ಮಾಸದಿರುವುದು, ಸುಲಭಕ್ಕೆ ಹೊಳಪನ್ನು